ಮಾಡಿರುವ ಬಗ್ಗೆ.

575(732)

ಶ್ರೀ ವಿ.ಕೃಷ್ಣಪ್ಪ(ದೊಡ್ಡಬಳ್ಳಾಪುರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು: ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಗೆ ಸೇರಿದ ಭೂಮಿಯನ್ನು ಶ್ರೀಮಂತರುಗಳೇ ಅತಿಕ್ರಮಿಸಿ ಕಬಳಿಸಿರುವುದು ಮತ್ತು ಅರಣ್ಯ ಇಲಾಖೆಯವರು ಕಾಂಪೌಂಡ್ ನಿರ್ಮಾಣ ಮಾಡುವುದರಲ್ಲಿ ನಡೆದಿರುವ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅರಣ್ಯ ಇಲಾಖೆಯಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ಸಸಿ ತಯಾರಿಕೆಯಲ್ಲಿ ನಡೆದಿರುವ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇದರ ಪೂರ್ಣ ತನಿಖೆಯನ್ನು ಉನ್ನತ ಅಧಿಕಾರಿಯೊಬ್ಬರಿಂದ ನಡೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ.

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ನಬಾರ್ಡ್‌ವತಿಯಿಂದ ಪಡೆದಿರುವ ಸಾಲದ ವಿವರ.

576(117)

ಶ್ರೀ ಕೃಷ್ಣಮೂರ್ತಿ ಕೆ.ಎಂ.(ಕಡೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ನಬಾರ್ಡ್ ವತಿಯಿಂದ ಕರ್ನಾಟಕ ರಾಜ್ಯಕ್ಕೆ ಬಿಡುಗಡೆಯಾಗಿರುವ ಹಣವೆಷ್ಟು: ಈ ಸಾಲದ ಹಣದಲ್ಲಿ 2000-2001ನೇ ಸಾಲಿಗೆ ಪ್ರತಿಯೊಂದು ಜಿಲ್ಲೆಯ ಕಾಮಗಾರಿಗಳಾದ ರಸ್ತೆ ಸೇತುವೆ ಮುಂತಾದವುಗಳಿಗೆ (1999-2000) ಬಿಡುಗಡೆ

ಮಾಡಿದ ಹಣವೆಷ್ಟು: (ಜಿಲ್ಲಾವಾರು ವಿವರಣೆ ನೀಡುವುದು)

2. ಆರ್.ಐ.ಡಿ.ಎಫ್ 1ರಿಂದ 6ರವರೆಗೆ ಕೈಗೊಂಡ ಕಾಮಗಾರಿಗಳಲ್ಲಿ ಇದುವರೆವಿಗೂ ಪೂರ್ಣವಾದ ಕಾಮಗಾರಿಗಳು ಯಾವುವು: ಅವುಗಳಲ್ಲಿ ಅಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು: ಈ ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

3. ಈ ಬಿಡುಗಡೆಯಾದ ಸಾಲಕ್ಕೆ ಸರ್ಕಾರವು ನಬಾರ್ಡ್ ಸಂಸ್ಥೆಗೆ ಎಷ್ಟು ಬಡ್ಡಿಯನ್ನು ಪ್ರತಿ ಸಾಲಿನಲ್ಲಿ ಪಾವತಿ ಮಾಡುತ್ತಾ ಬಂದಿದೆ: (ವಿವರಣೆ ನೀಡುವುದು)?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ಈವರೆಗೆ ಒಟ್ಟಾರೆ 622 ಕೋಟಿ ರೂ ಮೊತ್ತದ ಸಾಲ ಸಹಾಯ ಮಂಜೂರಾಗಿದೆ. ನಬಾರ್ಡ್ ಕಾಮಗಾರಿಗಳಿಗೆ ಮುಂಗಡವಾಗಿ ಸಾಲದ ಮೊತ್ತ ನೀಡುವುದಿಲ್ಲ. ಮೊದಲಿಗೆ ರಾಜ್ಯ ಸರ್ಕಾರ ಕಾಮಗಾರಿ ಕೈಗೊಂಡು ವೆಚ್ಚವನ್ನು ಭರಿಸಿ, ಕಾಮಗಾರಿಯ ಪ್ರಗತಿಗನುಗುಣವಾಗಿ ಈ ವೆಚ್ಚದ ಶೇಕಡ 90 ರಷ್ಟು ಮೊತ್ತವನ್ನು ಸಾಲವಾಗಿ ಮರುಪಾವತಿ ಪಡೆಯಬೇಕಾಗಿದ್ದು, ಹಣ ಬಿಡುಗಡೆಯ ಪ್ರಶ್ನೆ ಉದ್ಭವಿಸುವುದಿಲ್ಲ.

2. ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಡಿ ಆರ್ಐಡಿಎಫ್-2 ರಿಂದ ಕಾಮಗಾರಿಗಳನ್ನು ಕೈಗೊಂಡಿದ್ದು ವಿವರ ಕೆಳಕಂಡಂತೆ ಇದೆ. ಆರ್ಐಡಿಎಫ್ 2,3 ಮತ್ತು 4 ರ ಕಾಮಗಾರಿಗಳನ್ನು ಮಾರ್ಚ್ 2001ಕ್ಕೆ ಪೂರ್ಣಗೊಳಿಸಬೇಕಿದೆ ಮತ್ತು ಆರ್ಐಡಿಎಫ್5 ರ ಕಾಮಗಾರಿಗಳನ್ನು ಮಾರ್ಚ್ 2002ಕ್ಕೆ ಪೂರ್ಣಗೊಳಿಸಬೇಕಿರುತ್ತದೆ ಹಾಗೂ ಆರ್ಐಡಿಎಫ್ 6 ರಡಿ ಈವರೆಗೆ ಮಂಜೂರಾಗಿರುವ ಕಾಮಗಾರಿಗಳನ್ನು ಮಾರ್ಚ್ 2003ಕ್ಕೆ ಪೂರ್ಣಗೊಳಿಸಬೇಕಿರುತ್ತದೆ.

	ರಸ್ತೆ ಕಾಮಗಾರಿಗಳು			ಸೇತುವೆ ಕಾಮಗಾರಿಗಳು		
	ಕೈಗೊಂಡವು	ಪೂರ್ಣಗೊಂಡವು	ಅಪೂರ್ಣ	ಕೈಗೊಂಡವು	ಪೂರ್ಣಗೊಂಡವು	ಅಪೂರ್ಣ
ಆರ್ಐಡಿಎಫ್-2	119	117	2	124	118	6
ಆರ್ಐಡಿಎಫ್-3	315	238	77	58	36	22

ಆರ್‌ಐಡಿಎಫ್-4	260	85	175	41	10	31
ಆರ್‌ಐಡಿಎಫ್-5	317	6	311	34	-	34
ಆರ್‌ಐಡಿಎಫ್-6	150	-	150	39	-	39

3. ಈವರೆಗೆ ಲೋಕೋಪಯೋಗಿ ಇಲಾಖೆಯಡಿ 302 ಕೋಟಿ ರೂ ಸಾಲ ಪಡೆಯಲಾಗಿದೆ. ಬಡ್ಡಿಯನ್ನು ಇಲಾಖಾವಾರು ಪ್ರತ್ಯೇಕವಾಗಿ ಪಾವತಿಸುವುದಲ್ಲ. ರಾಜ್ಯದಲ್ಲಿ ಈ ಯೋಜನೆಯಡಿ ಪಡೆಯಲಾದ ಒಟ್ಟಾರೆ ಸಾಲಕ್ಕನುಗುಣವಾಗಿ ಪಾವತಿಸಲಾಗುತ್ತಿದೆ. ಇದರಂತೆ ವರ್ಷವಾರು ರಾಜ್ಯ ಸರ್ಕಾರ ನೀಡಿರುವ ಬಡ್ಡಿಯ ವಿವರ ಕೆಳಕಂಡಂತೆ ಇದೆ.

1996-97	6.65 ಕೋಟಿ
1997-98	14.09 ಕೋಟಿ
1998-99	23.23 ಕೋಟಿ
1999-2000	37.77 ಕೋಟಿ
2000-01	37.38 ಕೋಟಿ

(ಡಿಸೆಂಬರ್ 2000)

ಬೈಲಹೊಂಗಲ ನಗರದ ಕಿತ್ತೂರು ಚೆನ್ನಮ್ಮ ಸಮಾಧಿಗೆ ಹೋಗುವ ರಸ್ತೆ ಪೂರ್ಣಗೊಳಿಸುವುದು.

577(714)

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲಹೊಂಗಲ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿ.ಆರ್.ಎಫ್. ಫಂಡಿನಲ್ಲಿ ಬೆಳಗಾಂವ ಜಿಲ್ಲೆ ಬೈಲಹೊಂಗಲ ನಗರದ ಕಿತ್ತೂರು ಚೆನ್ನಮ್ಮ ಸಮಾಧಿಗೆ ಹೋಗುವ ರಸ್ತೆಗೆ ಕೇಂದ್ರ ಸರ್ಕಾರ ಎಷ್ಟು ಮೊತ್ತಕ್ಕೆ ಅನುಮತಿಯನ್ನು ನೀಡಲಾಯಿತು ಮತ್ತು ಈಗಾಗಲೇ ಎಷ್ಟು ಹಣ ಖರ್ಚಾಗಿದೆ.